ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 129 | Pages. 2 | Date: 24-04-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 129 - ಪುಟಗಳು : 2 | 24-04-2026 | ಶುಕ್ರವಾರ | Ph: 8762954248 | ದರ : ₹1


# ಜನರ ತಲೆ ಮೇಲೆ 1 ಲಕ್ಷ ರೂ. ಸಾಲದ ಹೊರೆ

## ಗೃಹಲಕ್ಷ್ಮಿಯ 2000 ರೂ.ನಲ್ಲಿ ಬದುಕು ಸಾಗುತ್ತಾ..? | ಕಾಂಗ್ರೆಸ್ ವಿರುದ್ಧ ಎಚ್‌ಡಿಕೆ ಗುಡುಗು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರ ನಿಮ್ಮ ತಲೆ ಮೇಲೆ ಒಬ್ಬೊಬ್ಬರಿಗೆ ತಲಾ ಒಂದು ಲಕ್ಷ ರೂಪಾಯಿ ಸಾಲ ಹೊರಿಸಿದೆ. ಕೇವಲ ಎರಡು ಸಾವಿರ ರೂಪಾಯಿ ಕೊಟ್ಟರೆ ಬದುಕು ಸಾಗಿಸಲು ಸಾಧ್ಯವೇ. ಆರೋಗ್ಯ ಚಿಕಿತ್ಸೆ ಪಡೆಯಲು ಆ ಹಣ ಸಾಕಾಗುತ್ತದೆಯೇ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಹೊಳೆನರಸೀಪುರ ತಾಲ್ಲೂಕಿನ ಉದ್ದೂರು ಹೊಸಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಹಾಗೂ ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಜಿಡಿಪಿ ದರ ಹೆಚ್ಚಾಗುತ್ತಿದೆ ನಿಜ, ಆದರೆ ಸಾಮಾನ್ಯ ಜನರ ಬದುಕು ಬದಲಾಗುತ್ತಿದೆ ಎಂದು ಅದರ ಅರ್ಥವಲ್ಲ. ಒಂದು ಕಡೆ ಶ್ರೀಮಂತಿಕೆ ಇದೆ, ಮತ್ತೊಂದೆಡೆ ಹಳ್ಳಿಗಳಲ್ಲಿ ವಿಪರೀತ ಬಡತನವಿದೆ. ಜನರು ವಾರಾಂತ್ಯದಲ್ಲಿ ರೆಸಾರ್ಟ್, ಹೋಂಸ್ಟೇಗಳಿಗೆ ಹಣ ಖರ್ಚು ಮಾಡುತ್ತಿದ್ದಾರೆ, ಆದರೆ ನಮ್ಮ ಹಳ್ಳಿಗಳು ಆರ್ಥಿಕವಾಗಿ ಹಿಂದುಳಿದಿವೆ ಎಂದು ವಿಷಾದಿಸಿದರು.

ಹಿಮಾಚಲ ಪ್ರದೇಶದಲ್ಲಿ ಉಚಿತ ವಿದ್ಯುತ್ ನೀಡಿ ಈಗ ಸರ್ಕಾರಿ ನೌಕರರಿಗೆ ಸಂಬಳ ನೀಡಲು ಹಣವಿಲ್ಲದಂತಾಗಿದೆ. ಅಲ್ಲಿ ನೌಕರರ ಅರ್ಧ ಸಂಬಳ ಕಟ್ ಮಾಡಲಾಗುತ್ತಿದೆ. ಕರ್ನಾಟಕದಲ್ಲೂ ಇದೇ ಪರಿಸ್ಥಿತಿ ಬರಲಿದೆ. ಈಗಾಗಲೇ ಇಲ್ಲಿನ ಸರ್ಕಾರಿ ನೌಕರರಿಗೆ ಮಾರ್ಚ್ ತಿಂಗಳ ಸಂಬಳ ಸರಿಯಾಗಿ ಪಾವತಿಯಾಗಿಲ್ಲ. ಈ ಸರ್ಕಾರ ಜನರ ಮೇಲೆ ಸಾಲದ ಹೊರೆ ಹೊರಿಸುತ್ತಿದೆ ಎಂದು ಕಿಡಿಕಾರಿದರು.




> ರಾಜಕೀಯದಲ್ಲಿ ಹಿರಿತನದಿಂದ ಬಂದವರು, ಅನುಭವಸ್ಥರು ಬಳಸುತ್ತಿರುವ ಪದಬಳಕೆ ನೋಡಿದರೆ ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂಬ ಆತಂಕ ಮೂಡುತ್ತದೆ. ಕರ್ನಾಟಕದವರೇ ಆದ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರು ತಮ್ಮ ಮನಸ್ಸಿನಲ್ಲಿ ಯಾವ ರೀತಿಯ ಭಾವನೆಗಳನ್ನು ಇಟ್ಟುಕೊಂಡಿದ್ದಾರೆ. ಗೌರವಾನ್ವಿತ ಪ್ರಧಾನಮಂತ್ರಿಗಳನ್ನೇ ಟೆರರಿಸ್ಟ್ ಅಂತ ಕರೆಯುತ್ತಾರೆ ಎಂದರೆ ಅವರಲ್ಲಿ ಎಷ್ಟು ಉದ್ಧಟತನ ಇರಬಹುದು. ಇದು ಯುವಜನಾಂಗಕ್ಕೆ ಯಾವ ರೀತಿ ದಾರಿ ತೋರಿಸುತ್ತದೆ ಎಂದು ಯೋಚನೆ ಮಾಡಬೇಕು.
>
> **- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

## ಮಾಧ್ಯಮಗಳ ವಿರುದ್ಧ ಸಿಡಿಮಿಡಿಯಾದ ಎಚ್‌ಡಿಕೆ

ಸಚಿವ ಜಮೀರ್ ಅಹಮದ್ ಖಾನ್ ಅವರು ಮರಳಿ ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿಗಳ ಕುರಿತು ಕೇಂದ್ರ ಸಚಿವ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಆ ಸಬ್ಜೆಕ್ಟ್‌ನೇ ನನ್ನ ಹತ್ತಿರ ರೈಜ್ ಮಾಡಬೇಡಿ ಎಂದು ಖಡಕ್ ಎಚ್ಚರಿಕೆ ನೀಡಿದರು.

ಅಂಥ ಕೆಟಗರಿ ಜನರ ಅವಶ್ಯಕತೆ ನಮಗಿಲ್ಲ. ಅದ್ಯಾವುದನ್ನೂ ಸೀರಿಯಸ್ ಆಗಿ ತೆಗೆದುಕೊಳ್ಳಬೇಡಿ. ನಮ್ಮ ಪಕ್ಷದಲ್ಲಿ ಅಧಿಕಾರಕ್ಕೋಸ್ಕರವಾಗಿ ಅಂತಹ ಕೆಟಗರಿ ಜನಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯೇ ಇಲ್ಲ. ನಮಗೆ ಆ ಬಗ್ಗೆ ಈಗಾಗಲೇ ಎಲ್ಲಾ ಅನುಭವಗಳಾಗಿವೆ. ಅದರ ಅವಶ್ಯಕತೆನೂ ಇಲ್ಲ ನಮಗೆ, ಸಾಕಷ್ಟು ಅನುಭವಿಸಿದ್ದೇನೆ, ಎಂದು ತಮ್ಮ ಹಳೆಯ ಕಹಿನೆನಪುಗಳನ್ನು ಹೊರಹಾಕಿದರು.

ಯಾವುದೇ ಕಾರಣಕ್ಕೂ ರಾಜಕೀಯದಲ್ಲಿ ಏನೋ ಶಕ್ತಿ ಬರುತ್ತೆ ಅಂತ ಹೇಳಿ, ಬೆಂದ ಮನೆಯಲ್ಲಿ ಗಳ ಹಿರಿಯುವ ಕೆಲಸಕ್ಕೆ ನಾನು ಕೈ ಹಾಕುವುದಿಲ್ಲ, ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವುದು, ಕಾಂಗ್ರೆಸ್ ನಾಯಕರು ಅನ್ನ ತಿನ್ನುತ್ತಿರುವುದು ಆ ವರ್ಗದ ಜನಗಳಿಂದಲೇ ಅಂತ ಅವರೇ (ಜಮೀರ್) ಹೇಳುತ್ತಿದ್ದಾರೆ. ಇವತ್ತು ಆ ಪರಿಸ್ಥಿತಿಯನ್ನು ರಾಜ್ಯಕ್ಕೆ ತಂದು ಇಟ್ಟಿದ್ದಾರೆ. ಪ್ರತಿನಿತ್ಯ ಅನ್ನ ತಿನ್ನುತ್ತಿರುವುದೇ ಆ ಒಂದು ವರ್ಗದಿಂದ ಅಂತ ಹೇಳುತ್ತಿದ್ದರೂ, ಇವತ್ತು ಕಾಂಗ್ರೆಸ್‌ನವರು ಯಾರಾದರೂ ಅದನ್ನು ವಿರೋಧ ಮಾಡಿದ್ದೀರಾ ಎಂದು ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು.

ಅವರೇ ಕಂಡಿಷನ್‌ಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಎಲ್ಲೆಲ್ಲಿಗೆ ಹೋಗುತ್ತೋ ನೋಡೋಣ ಬನ್ನಿ, ಎಂದು ಕುಮಾರಸ್ವಾಮಿ ಮಾರ್ಮಿಕವಾಗಿ ನುಡಿದರು.

## ಜಾತಿ ವ್ಯಾಮೋಹ ಬಿಡಿ

**ರಾಜಕೀಯ ಲಾಭಕ್ಕಾಗಿ ಜಾತಿ ಬಳಸುವುದನ್ನು ಖಂಡಿಸಿದ ಅವರು, ಜಾತಿ ಎಂಬ ವ್ಯಾಮೋಹವನ್ನು ಬದಿಗಿಡಿ, ಅದರಿಂದ ಏನೂ ಸಿಗುವುದಿಲ್ಲ. ನಾನು ರಾಜಕೀಯಕ್ಕೆ ಬರಬೇಕು ಎಂಬ ಹಂಬಲ ಹೊಂದಿರಲಿಲ್ಲ, ಪರಿಸ್ಥಿತಿ ನನ್ನನ್ನು ಎಳೆದುಕೊಂಡು ಬಂದಿದೆ. ದೇವೇಗೌಡರ ಕನಸನ್ನು ಈಡೇರಿಸಲು ದೇವರು ನನಗೆ ಐದು ಬಾರಿ ಜೀವ ಕೊಟ್ಟಿದ್ದಾನೆ. ಕಷ್ಟ ಬಂದಾಗ ನಾವು ದೇವರಿಗೆ ಶರಣಾಗುತ್ತೇವೆ. ಆಸ್ಪತ್ರೆಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಚಿಕಿತ್ಸೆ ಪಡೆಯುವ ಶಕ್ತಿ ಬಡವರಿಗಿದೆಯೇ ಎಂದು ಭಾವನಾತ್ಮಕವಾಗಿ ಪ್ರಶ್ನಿಸಿದರು.**

## ರೇವಣ್ಣ ನನ್ನ ಮಾತು ಕೇಳುವುದಿಲ್ಲ

ತಮ್ಮ ಸಹೋದರ ಎಚ್.ಡಿ. ರೇವಣ್ಣ ಅವರ ಬಗ್ಗೆ ಮಾತನಾಡಿದ ಕುಮಾರಸ್ವಾಮಿ, ರೇವಣ್ಣ ಈ ಜಿಲ್ಲೆಯಲ್ಲಿ ಅದೆಷ್ಟು ದೇವಾಲಯಗಳನ್ನು ಕಟ್ಟಿಸಿದ್ದಾರೋ ಗೊತ್ತಿಲ್ಲ. ಅವರ ಭಕ್ತಿ ಅಚಲವಾದುದು. ದೇವಾಲಯಕ್ಕೆ ಹೋಗಿ ಪ್ರಸಾದ ಸ್ವೀಕರಿಸುವವರೆಗೂ ಅವರು ಚಪ್ಪಲಿ ಹಾಕುವುದಿಲ್ಲ, ವಿಧಾನಸೌಧಕ್ಕೂ ಚಪ್ಪಲಿ ಇಲ್ಲದೆ ಬರುತ್ತಾರೆ. ಅವರ ಹೃದಯ ಶುದ್ಧವಾಗಿದೆ, ಆದರೆ ಅವರಿಗೆ ಮುಂಗೋಪ ಜಾಸ್ತಿ. ಅದನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ನಾನು ಹೇಳುತ್ತಲೇ ಇರುತ್ತೇನೆ, ಆದರೆ ಅವರು ಕೇಳುವುದಿಲ್ಲ ಎಂದು ಹಾಸ್ಯ ಚಟಾಕಿ ಹಾರಿಸಿದರು.



## ಎಸ್‌ಎಸ್‌ಎಲ್‌ಸಿ: ಅಂಚೆ ನೌಕರನ ಮಗ ಜಿಲ್ಲೆಗೆ ಟಾಪರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಲೂರು ತಾಲ್ಲೂಕು ಬೆಥೆಸ್ಡಾ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಸುಮೇಧ ಮೌರ್ಯ 625ಕ್ಕೆ 623 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನವನ್ನು ಹಾಗೂ ರಾಜ್ಯ ಮಟ್ಟದಲ್ಲಿ ಮೂರನೇ ಸ್ಥಾನವನ್ನು ತನ್ನದಾಗಿಸಿಕೊಂಡಿದ್ದಾನೆ.

ಆಲೂರು ತಾಲೂಕಿನ ಬಾವಸವಳ್ಳಿ ಗ್ರಾಮದ ನಿವಾಸಿ ಹಾಗೂ ಹಾಸನದ ಮುಖ್ಯ ಅಂಚೆ ಕಚೇರಿಯಲ್ಲಿ ನೌಕರರಾಗಿರುವ ಶಿವಣ್ಣ ಬಿ.ಆರ್. ಮತ್ತು ಜಯಂತಿ ದಂಪತಿಯ ಪುತ್ರನಾಗಿರುವ ಸುಮೇಧ ಮೌರ್ಯ. ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ತಲಾ



100ರಲ್ಲಿ 99 ಅಂಕಗಳನ್ನು ಗಳಿಸಿದ್ದು, ಉಳಿದ ಎಲ್ಲಾ ವಿಷಯಗಳಲ್ಲಿ ಶೇ.100ರಷ್ಟು ಅಂಕಗಳನ್ನು ಪಡೆದಿದ್ದಾನೆ.

ಮಗನ ಈ ಯಶಸ್ಸಿಗೆ ತಂದೆ-ತಾಯಿ ಶಿವಣ್ಣ ಮತ್ತು ಜಯಂತಿ ದಂಪತಿ ಅಪಾರ ಸಂತೋಷ ವ್ಯಕ್ತಪಡಿಸಿದ್ದು, ಇನಮ್ಮ ಮಗನ ಪರಿಶ್ರಮದ ಫಲವೇ ಇದು. ಅವನಿಗೆ ಬೇಕಾದ ಪ್ರೋತ್ಸಾಹ ಮತ್ತು ಬೆಂಬಲ ನೀಡಿದ್ದೇವೆ. ಅವನು ಇನ್ನೂ ದೊಡ್ಡ ಸಾಧನೆ ಮಾಡಲಿಟಿ ಎಂದು ಆಶಿಸಿದ್ದಾರೆ.

ಶಿಕ್ಷಕರು ಹಾಗೂ ಶಾಲಾ ಆಡಳಿತ ಮಂಡಳಿ ಕೂಡ ಸುಮೇಧನ ಸಾಧನೆಯನ್ನು ಮೆಚ್ಚಿ ಅಭಿನಂದಿಸಿದ್ದು, ಅವನ ಸಾಧನೆ ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ ಎಂದು ಹೇಳಿದ್ದಾರೆ.






## ಎಸ್‌ಎಸ್‌ಎಲ್‌ಸಿ: ಜಿಲ್ಲೆಗೆ ನಾಲ್ಕನೇ ಸ್ಥಾನದ ಖುಷಿ

### ಗ್ರಾಮೀಣ ವಿದ್ಯಾರ್ಥಿಗಳ ಮೇಲುಗೈ | 475 ಮಕ್ಕಳು ಅನುತ್ತೀರ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶದಲ್ಲಿ ಹಾಸನ ಜಿಲ್ಲೆ ಶೇ. 97.51 ಫಲಿತಾಂಶದೊಂದಿಗೆ ರಾಜ್ಯಕ್ಕೆ 4ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ ಶೇ. 82.12 ಫಲಿತಾಂಶದೊಂದಿಗೆ 6ನೇ ಸ್ಥಾನದಲ್ಲಿತ್ತು.





ಈ ಬಾರಿ ಶೇ. 15ಕ್ಕೂ ಹೆಚ್ಚು ಏರಿಕೆ ಕಂಡು ಟಾಪ್ 5ರಲ್ಲಿ ಸ್ಥಾನ ಪಡೆದಿರುವುದು ಗಮನಾರ್ಹ.

ಈ ಬಾರಿ ಜಿಲ್ಲೆಯಿಂದ ಪರೀಕ್ಷೆಗೆ ಹಾಜರಾದ 19,041 ವಿದ್ಯಾರ್ಥಿಗಳ ಪೈಕಿ 18,566 ಉತ್ತೀರ್ಣರಾಗಿದ್ದಾರೆ. 475 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಹೆಣ್ಣುಮಕ್ಕಳೇ ಮೇಲುಗೈ ಸಾಧಿಸಿದ್ದು, 9,618 ವಿದ್ಯಾರ್ಥಿನಿಯರ ಪೈಕಿ 9,481 ಮಂದಿ ಅಂದರೆ ಶೇ. 98.58 ಉತ್ತೀರ್ಣರಾಗಿದ್ದಾರೆ. ಹುಡುಗರ ತೇರ್ಗಡೆ ಪ್ರಮಾಣ ಶೇ.96.41ಆಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶೇ. 97.96 ಫಲಿತಾಂಶದೊಂದಿಗೆ ನಗರ ಪ್ರದೇಶದ ಶೇ.96.66 ಗಿಂತ ಮುಂದಿದ್ದಾರೆ.

ಆಡಳಿತವಾರು ಸಾಧನೆಯಲ್ಲಿ ಖಾಸಗಿ ಅನುದಾನ ರಹಿತ ಶಾಲೆಗಳು ಶೇ.99.46 ಫಲಿತಾಂಶದೊಂದಿಗೆ ಮೊದಲ ಸ್ಥಾನದಲ್ಲಿವೆ. ಸರ್ಕಾರಿ ಶಾಲೆಗಳು ಶೇ.97.62 ಹಾಗೂ ಅನುದಾನಿತ ಶಾಲೆಗಳು ಶೇ.94.68 ಸಾಧನೆ ಮಾಡಿವೆ. ಜಿಲ್ಲೆಯ ಒಟ್ಟು 536 ಪ್ರೌಢಶಾಲೆಗಳ ಪೈಕಿ 265 ಶಾಲೆಗಳು ಶೇ.100 ಫಲಿತಾಂಶ ದಾಖಲಿಸಿವೆ. ಅದರಲ್ಲಿ 146 ಸರ್ಕಾರಿ, 26 ಅನುದಾನಿತ ಹಾಗೂ 86 ಖಾಸಗಿ ಶಾಲೆಗಳು ಸೇರಿವೆ.

ಆಲೂರಿನ ಬೆಥೆಸ್ಡಾ ಆಂಗ್ಲ ಮಾಧ್ಯಮ ಶಾಲೆಯ ಬಿ.ಎಸ್. ಸುಮೇಧಾ ಮೌರ್ಯ 623/625 ಅಂಕಗಳೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಅರಕಲಗೂಡಿನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಕೆ.ಆರ್.ಸನಾ , ಹಾಸನದ ಬ್ರಿಲಿಯಂಟ್ ಪಬ್ಲಿಕ್ ಸ್ಕೂಲ್‌ನ ಎಚ್.ಆರ್.ಚರಿತ್ರಾ, ಯುನೈಟೆಡ್ ಹೈಸ್ಕೂಲ್‌ನ ಯು.ಕೆ.ನಿರೂಪ್ ಬಾಬು ಹಾಗೂ ವಿಜಯ ಶಾಲೆಯ ಪುಣ್ಯ ಆರ್. ತಲಾ 622 ಅಂಕ ಪಡೆದು ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 475 ವಿದ್ಯಾರ್ಥಿಗಳು 600ಕ್ಕೂ ಅಧಿಕ ಅಂಕ ಗಳಿಸಿದ್ದಾರೆ. ಹಾಸನ ತಾಲ್ಲೂಕೊಂದರಲ್ಲೇ 149 ವಿದ್ಯಾರ್ಥಿಗಳು ಈ ಸಾಧನೆ ಮಾಡಿದ್ದಾರೆ.

ತಾಲೂಕುವಾರು ಫಲಿತಾಂಶದಲ್ಲಿ ಸಕಲೇಶಪುರ ಶೇ. 99.17 ದೊಂದಿಗೆ ಜಿಲ್ಲೆಗೆ ಮೊದಲ ಸ್ಥಾನ ಪಡೆದರೆ, ಚನ್ನರಾಯಪಟ್ಟಣ ಶೇ. 98.22 ದೊಂದಿಗೆ ದ್ವಿತೀಯ, ಆಲೂರು ಶೇ. 98.12 ದೊಂದಿಗೆ ತೃತೀಯ ಸ್ಥಾನದಲ್ಲಿವೆ. ಹಾಸನ ತಾಲೂಕು 96.67% ಫಲಿತಾಂಶ ದಾಖಲಿಸಿದೆ.

ವಿಷಯವಾರು ಫಲಿತಾಂಶದಲ್ಲಿ ದ್ವಿತೀಯ ಭಾಷೆ 99.52% ದೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಸಮಾಜ ವಿಜ್ಞಾನ 98.74% ಕನಿಷ್ಠ ಸಾಧನೆ ತೋರಿದೆ. ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳು 98.73%, ಕನ್ನಡ ಮಾಧ್ಯಮ 95.61% ಫಲಿತಾಂಶ ಪಡೆದಿದ್ದಾರೆ. 0+ ಗ್ರೇಡ್ 11.49% ವಿದ್ಯಾರ್ಥಿಗಳು ಪಡೆದಿದ್ದು, ಕೇವಲ 2.49% ವಿದ್ಯಾರ್ಥಿಗಳು ಮಾತ್ರ ಅನುತ್ತೀರ್ಣರಾಗಿದ್ದಾರೆ.

## ಎಲೈಟ್ ಶಾಲೆಯ ಕುಶಾಲ್‌ಗೆ 617 ಅಂಕ

ಹಾಸನ: ಇಲ್ಲಿನ ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆಯು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಸತತ 16ನೇ ವರ್ಷವೂ ಶೇ. 100 ಫಲಿತಾಂಶ ಪಡೆದಿದೆ. ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 49 ವಿದ್ಯಾರ್ಥಿಗಳಲ್ಲಿ 18 ಮಕ್ಕಳು ಅತ್ಯುನ್ನತ ಶ್ರೇಣಿಯಲ್ಲಿ ಮತ್ತು 30 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಒಬ್ಬ ವಿದ್ಯಾರ್ಥಿಯು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಹೆಚ್.ಸಿ.ಕುಶಾಲ್ 617 ಅಂಕ ಪಡೆದು (ಶೇ. 98.72) ಪ್ರಥಮ ಹಾಗೂ ನಕ್ಷತ್ರ 616 ಅಂಕ ಪಡೆದು (ಶೇ. 98.56) ಶಾಲೆಗೆ ಕೀರ್ತಿ ತಂದಿದ್ದಾರೆ.

ಶಾಲೆಯ ಪ್ರಾಂಶುಪಾಲ, ಶಿಕ್ಷಕರು ಹಾಗು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

> **ಇದೇ ಮೊದಲ ಬಾರಿಗೆ ಬ್ಲೂ ಪ್ರಿಂಟ್ ನೀಡಿದ್ದರಿಂದ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಗೆ ಅನುಕೂಲವಾಯಿತು. ಮನೆ ಮನೆ ಭೇಟಿ, ಪರಿಹಾರ ಬೋಧನೆ ಹಾಗು ಪುನರಾವರ್ತನೆಯಿಂದ ಹೆಚ್ಚು ಅಂಕ ಗಳಿಸಲು ಮಕ್ಕಳಿಗೆ ಸಾಧ್ಯವಾಗಿದೆ. ಜಿಲ್ಲಾಧಿಕಾರಿ ಅವರು ನಡೆಸಿದ ಫ್ರೈಡೆ ಫ್ರೆಂಡ್ಲಿ ನೆರವಾಗಿದೆ. ಜೊತೆಗೆ ಸಂಸದ ಶ್ರೇಯಸ್ ಪಟೇಲ್ ಅವರು ಮೂರು ಬಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿ ಫಲಿತಾಂಶ ಚೇತರಿಕೆಗೆ ಸೂಚಿಸಿದ್ದರು. ಎಲ್ಲರ ಸಂಘಟಿತ ಪ್ರಯತ್ನದಿಂದ ಉತ್ತಮ ಫಲಿತಾಂಶ ಸಾಧ್ಯವಾಗಿದೆ.**
>
> **- ಕೆ.ಎನ್.ಬಲರಾಮ್, ಡಿಡಿಪಿಐ**

# ಅರ್ಥಪೂರ್ಣ ಪಟ್ಟಾಭಿರಾಮ ಬ್ರಹ್ಮ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಇತಿಹಾಸ ಪ್ರಸಿದ್ಧ ಶ್ರೀಪಟ್ಟಾಭಿರಾಮಸ್ವಾಮಿ ಮಹಾ ಬ್ರಹ್ಮರಥೋತ್ಸವ ವೈಖಾನಸ ಆಗಮೋಕ್ತ ರೀತ್ಯಾ ನೂರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವ ಅಂಗವಾಗಿ ಕಳೆದ ಹದಿನೈದು ದಿನಗಳಿಂದಲೇ ವಿವಿಧ ಬಗೆಯ ಪೂಜಾ ಕಾರ್ಯಕ್ರಮಗಳು ನಡೆಯುತ್ತಿದ್ದವು.

ರಥೋತ್ಸವದ ಪೂರ್ವಭಾವಿಯಾಗಿ ಪಟ್ಟಾಭಿರಾಮಸ್ವಾಮಿಯ ಮೂಲ ಮೂರ್ತಿಗೆ ಪಂಚಾಮೃತ ಅಭಿಷೇಕ, ವಿವಿಧ ಹೋಮ, ಧ್ವಜಾರೋಹಣ, ನಿತ್ಯೋತ್ಸವ, ಹಂಸವಾಹನೋತ್ಸವ, ಶೇಷವಾಹನೋತ್ಸವ, ಪುಷ್ಪಮಂಟಪೋತ್ಸವ, ಸಿಂಹವಾಹನೋತ್ಸವ, ಗಜ ವಾಹನೋತ್ಸವ, ಸೀತಾರಾಮ ಕಲ್ಯಾಣೋತ್ಸವ ಮುಂತಾದ ಧಾರ್ಮಿಕ ಕೈಂಕರ್ಯಗಳು ವಿಧಿವತ್ತಾಗಿ ಜರುಗಿದವು. ರಥೋತ್ಸವ ಅಂಗವಾಗಿ



ದೇವಾಲಯದಲ್ಲಿ ಸೂರ್ಯಮಂಡಲೋತ್ಸವ, ಬಲಿ ಪ್ರದಾನ, ನಿತ್ಯೋತ್ಸವ, ಯಾತ್ರಾದಾನ ಪೂರ್ವ ಕೃಷ್ಣ ಗಂಧೋತ್ಸವ, ಮಂಟಪೋತ್ಸವ ಹಾಗೂ ಇನ್ನಿತರ ವಿಶೇಷ ಪೂಜೆಗಳು ಪ್ರಧಾನ ಅರ್ಚಕರ ನೇತೃತ್ವದಲ್ಲಿ ನಡೆಯಿತು.

ಉತ್ಸವದ ವೇಳೆ ದೇವರ ಮೂರ್ತಿಯನ್ನು ವಿಶೇಷವಾಗಿ ಅಲಂಕರಿಸಿದ ಮಂಟಪದಲ್ಲಿ ಪ್ರತಿಷ್ಠಾಪಿಸಿ ಉತ್ಸವವನ್ನು ಅಡ್ಡಪಲ್ಲಕ್ಕಿಯಲ್ಲಿ ಕೂರಿಸಿ ಅನೇಕ ಸುತ್ತು ದೇವಾಲಯವನ್ನು ಪ್ರದಕ್ಷಿಣೆ ಹಾಕುವ ವೇಳೆ ಪ್ರತಿಯೊಂದು ಸುತ್ತಿಗೊಂದರಂತೆ ಪ್ರತ್ಯೇಕ ವಾದ್ಯಪ್ರಕಾರದ ಮೂಲಕ ಶ್ರೀಪಟ್ಟಾಭಿರಾಮಸ್ವಾಮಿಗೆ ಪೂಜೆ ನೆರವೇರಿಸಿದರು.

ರಥೋತ್ಸವದ ಅಂಗವಾಗಿ ಮಂಗಳವಾರ ಮಧ್ಯಾಹ್ನ 1.30ಕ್ಕೆ ಉತ್ಸವ ಮೂರ್ತಿಯನ್ನು ಹೊರತಂದು ವಿಶೇಷ ಪೂಜೆ ಸಲ್ಲಿಸಿ, ಅಡ್ಡಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ವೇದಮಂತ್ರಗಳೊಂದಿಗೆ ಉತ್ಸವ ನೆರವೇರಿಸಿದರು. ರಥದ ಪೂಜೆ ನಂತರ ಪುಷ್ಪಾಲಂಕೃತಗೊಂಡ ರಥದಲ್ಲಿ ಶ್ರೀಪಟ್ಟಾಭಿ ರಾಮಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದರು. ಬಳಿಕ ಭಕ್ತರು ಹರ್ಷೋದ್ಘಾರದಿಂದ ಶ್ರೀರಾಮ್ ಜೈರಾಮ್ ಜೈ ಜೈರಾಮ್, ಗೋವಿಂದಾ, ಗೋವಿಂದಾ ಎನ್ನುತ್ತಾ ರಥವನ್ನು ಎಳೆಯುವ ಮೂಲಕ ರಥೋತ್ಸವಕ್ಕೆ ಸಾಕ್ಷಿಯಾದರು.

ರಥವನ್ನು ಎಳೆಯುವಾಗ ಮಹಿಳೆಯರು ಶ್ರೀರಾಮ ರಾಮನಾಥಪುರದಲ್ಲಿ ಶ್ರೀಪಟ್ಟಾಭಿರಾಮ ಸ್ವಾಮಿಯವರ ಮಹಾ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ಭಜನೆಯನ್ನು ಹಾಗೂ ಪುರುಷರು ವೇದಮಂತ್ರಗಳನ್ನು ಪಠಣ. ಮಾಡುತ್ತಿದ್ದರು. ರಥ ಸಾಗಿದ ರಸ್ತೆಯಲ್ಲಿ ಎಲ್ಲಾ ಮನೆಯವರು ರಂಗೋಲಿ ಹಾಕಿ ಸಿಂಗರಿಸಿದ್ದರು. ಭಕ್ತರು ರಥಕ್ಕೆ ಈಡುಗಾಯಿ ಒಡೆದು ಹಣ್ಣುಕಾಯಿ ಅರ್ಪಿಸಿ ಭಕ್ತಿ ಭಾವ ಮೆರೆದರು.

ಈ ಸಂದರ್ಭದಲ್ಲಿ ಸಮುದಾಯದ ಮುಖಂಡರು, ಹಿರಿಯರು, ದೇವಾಲಯ ಸಮಿತಿಯವರು, ಭಕ್ತರು ಹಾಜರಿದ್ದರು.

## ಏ. 26ಕ್ಕೆ ತಣ್ಣೀರು ಹಳ್ಳ ಮಠದಲ್ಲಿ ವಿವಿಧ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಡೆದಾಡುವ ದೇವರು ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಹಾಗು ಶ್ರೀ ಶಿವಲಿಂಗ ಸ್ವಾಮೀಜಿ ಅವರ 92ನೇ ಜಯಂತಿ ಕಾರ್ಯಕ್ರಮವನ್ನು ಏ. 26ರಂದು ಅದ್ದೂರಿಯಾಗಿ ಆಚರಿಸಲಾಗುತ್ತಿದೆಯೆಂದು ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಹೇಳಿದರು. ಮಠದ ಆವರಣದಲ್ಲಿ ಬುಧವಾರ ನಡೆದ ಧಾರ್ಮಿಕ ಸಮಾರಂಭದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಅದೇ ದಿನ ವಿಜಯಕುಮಾರ ಸ್ವಾಮೀಜಿಯವರ ಜಂಗಮ ಪಟ್ಟಾಧಿಕಾರದ 56ನೇ ಮಾಸದ ಕಾರ್ಯಕ್ರಮ, ಶ್ರೀ ಶಿವಲಿಂಗ ಸ್ವಾಮೀಜಿ ದಾಸೋಹ ಭವನ ಲೋಕಾರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಯಶಸ್ಸಿಗಾಗಿ ವಿವಿಧ ಸಮಿತಿ ರಚಿಸಲಾಯಿತು. ಸಭೆಯಲ್ಲಿ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮಿಜಿ, ಸಮಾಜ ಮುಖಂಡರಾದ ಬಿ.ಪಿ.ಐಸಾಮಿಗೌಡ, ಬಿ.ಡಿ. ಬಸವಣ್ಣ, ವಿದ್ಯಾಶಂಕರ್, ಲೆಕ್ಕ ಪರಿಶೋಧಕ ಕಾಂತರಾಜ್, ಮಠದ ಕಾರ್ಯದರ್ಶಿ ಸೋಮಣ್ಣ, ಕಟ್ಟಾಯ ಶಿವಕುಮಾರ್, ವಕೀಲ ಸೀಗೆ ಈಶ್ವರ್, ಯು.ಎಸ್.ಬಸವರಾಜ್, ಬಾಳ್ಳುಪೇಟೆ ನೇತ್ರಾವತಿ ಮತ್ತಿತರರಿದ್ದರು.




## ಆಲೂರಿನಲ್ಲಿ ಮತ್ತೊಂದು ವಿದ್ಯುತ್ ಉಪ ವಿತರಣೆ ಕೇಂದ್ರ: ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮುಂದಿನ ಒಂದು ತಿಂಗಳಿನಲ್ಲಿ ತಾಲ್ಲೂಕಿಗೆ ಮತ್ತೊಂದು ವಿದ್ಯುತ್ ಉಪಕೇಂದ್ರ ಮಾಡುವುದಾಗಿ ಶಾಸಕ ಸಿಮೆಂಟ್ ಮಂಜು ಭರವಸೆ ನೀಡಿದರು.

ಆಲೂರು ಮುಖ್ಯ ರಸ್ತೆಯಂಚಿನಲ್ಲಿರುವ ಪ್ರವಾಸಿ ಮಂದಿರದಿಂದ ಕಸಬಾ ಯಡೂರು ಗ್ರಾಮದ ವರೆಗೆ 900 ಮೀ. ಕಾಂಕ್ರೀಟ್ ರಸ್ತೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕೇವಲ ಒಂದು ವಿದ್ಯುತ್ ವಿತರಣೆ ಉಪ ಕೇಂದ್ರವಿತ್ತು. ಸದ್ಯ 27 ಕೋಟಿ ರೂ. ವೆಚ್ಚದಲ್ಲಿ ಅಬ್ಬನ ಬಳಿ ವಿದ್ಯುತ್ ಉಪ ಕೇಂದ್ರ ನಿರ್ಮಾಣವಾಗುತ್ತಿದೆ. ನಾಲ್ಕಾರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ತಾಲ್ಲೂಕಿನಲ್ಲಿ ಎರಡು ವಿದ್ಯುತ್ ಉಪಕೇಂದ್ರಗಳಾದರೆ ವಿದ್ಯುತ್ ಸಮಸ್ಯೆ ನಿವಾರಣೆಯಾಗಲಿದೆ ಎಂದು ಹೇಳಿದರು.

ಯಡೂರು ಗ್ರಾಮದ ರಸ್ತೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬಹುತೇಕ ಗ್ರಾಮೀಣ ಭಾಗದ ಹಲವಾರು ಗ್ರಾಮಗಳಲ್ಲಿ ಶಾಸಕರ ಅನುದಾನದಲ್ಲಿ ರಸ್ತೆಗಳ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪಟ್ಟಣದ ಬಿಕ್ಕೋಡು ವೃತ್ತದಿಂದ ಬೈರಾಪುರದವರೆಗೆ ಸುಮಾರು 4.5 ಕೋಟಿ ರೂ. ವೆಚ್ಚದಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ತಾಲ್ಲೂಕಿನಲ್ಲಿ ವಾಟೆಹೊಳೆ, ಯಗಚಿ ನದಿ ಹರಿಯುತ್ತದೆ. ಎಂಟು ಏತ ನೀರಾವರಿಗಳು ಸ್ಥಗಿತಗೊಂಡಿವೆ. ಏತ ನೀರಾವರಿ ಯೋಜನೆಗಳನ್ನು ಪುನ: ಆರಂಭಿಸಿ ರೈತರ ಜಮೀನಿಗೆ ನೀರು ಹರಿಸುತ್ತೇನೆ. ವಾಟೆಹೊಳೆ ಯೋಜನೆಯಲ್ಲಿ 18 ಸಾವಿರ ಎಕರೆ ಪ್ರದೇಶಕ್ಕೆ ನೀರು ಕೊಡಬೇಕಾಗಿತ್ತು. ಕೇವಲ 5 ಸಾವಿರ ಎಕರೆ ಪ್ರದೇಶಕ್ಕೆ ಮಾತ್ರ ನೀರು ಹರಿಯುತ್ತಿದೆ. ಪ್ರತಿ ವಿದಾನಸಭೆ ಅಧಿವೇಶನದಲ್ಲಿ ಪ್ರಶ್ನೆಗಳನ್ನು ಮಾಡಿ ಯೋಜನೆ ಪೂರೈಸಲು ಶ್ರಮಿಸುತ್ತಿದ್ದೇನೆ. ಅಧಿವೇಶನದಲ್ಲಿ ಕ್ಷೇತ್ರದ ಅಭಿವೃದ್ಧಿ ಕುರಿತು ನೀರಾವರಿ, ರಸ್ತೆಗಳು, ವಿದ್ಯುತ್ ಬಗ್ಗೆ ಮಾತ್ರ ಪ್ರಶ್ನೆ ಮಾಡುತ್ತೇನೆ ಹೊರತು, ಯಾವುದೆ ವೈಯಕ್ತಿಕ ಪ್ರಶ್ನೆಗಳನ್ನು ಮಾಡುವುದಿಲ್ಲ ಎಂದರು.

ಗ್ರಾಮಸ್ಥರಾದ ವೈ.ಬಿ. ಟೀಕರಾಜ್, ಶಂಕರಪ್ಪ, ವೈ.ಡಿ. ವಿಶ್ವನಾಥ್, ಪುಟ್ಟಸ್ವಾಮಿ, ಗಂಗಾಧರ ಶಾಸ್ತ್ರಿ, ಮೋಹನ್, ರವಿ, ನಂಜುಂಡಪ್ಪ ಉಪಸ್ಥಿತರಿದ್ದರು.

## ಎಂಸಿಇ ಕಾಲೇಜಿನಲ್ಲಿ ಕಾರ್ಯಾಗಾರ ಯಶಸ್ವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಬ್ಯುಸಿನೆಸ್ ಸಿಸ್ಟಮ್ಸ್ ವಿಭಾಗದಿಂದ ಬುಧವಾರ ಸುಧಾರಿತ ವಿಕೇಂದ್ರೀಕೃತ ಅಪ್ಲಿಕೇಶನ್ ಮತ್ತು ಸ್ಮಾರ್ಟ್ ಕಾಂಟ್ರಾಕ್ಟ್‌ಗಳ ಕುರಿತು ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ವಿಕೇಂದ್ರೀಕೃತ ತಂತ್ರಜ್ಞಾನ, ಬ್ಲಾಕ್ ಚೈನ್‌ನ ಮೂಲ ಪರಿಕಲ್ಪನೆ ಮತ್ತು ಸ್ಮಾರ್ಟ್ ಕಾಂಟ್ರಾಕ್ಟ್ ಅಭಿವೃದ್ಧಿಯ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿಭಾಗದ ಮುಖ್ಯಸ್ಥ ಡಾ. ಬಿ.ರಮೇಶ್ ಮಾತನಾಡಿ, ಬ್ಲಾಕ್‌ಚೈನ್ ತಂತ್ರಜ್ಞಾನವು ಡಿಜಿಟಲ್ ಲೆಡ್ಜರ್ ಇದ್ದ ಹಾಗೆ ಎಂದರು. ಸಾವಿರಾರು ಜನರೊಂದಿಗೆ ಹಂಚಿಕೊಂಡಿರುವ ಡಿಜಿಟಲ್ ನೋಟ್‌ಬುಕ್ ಎಂದು ಭಾವಿಸಿ ಬಳಸಬೇಕು. ಒಮ್ಮೆ ಅದರಲ್ಲಿ ಏನನ್ನಾದರೂ ಬರೆದರೆ ಎಲ್ಲರಿಗೂ ತಿಳಿಯದೆ ಯಾರೂ ಅದನ್ನು ಅಳಿಸಲು ಅಥವಾ ಬದಲಾಯಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ಹೊಸ ನಮೂದು ಅದನ್ನು ಬ್ಲಾಕ್ ಎಂದು ಕರೆಯಲಾಗುತ್ತದೆ. ಬಲವಾದ ಕ್ರಿಪ್ಟೋಗ್ರಫಿಯನ್ನು (ಗುಪ್ತ ಲಿಪಿ ಶಾಸ್ತ್ರ) ಬಳಸಿಕೊಂಡು ಹಿಂದಿನದಕ್ಕೆ ಸಂಬಂಧ ಹೊಂದಿರುತ್ತದೆ. ಪ್ರಸ್ತುತ ಮತ್ತು ಭವಿಷ್ಯದ ತಂತ್ರಜ್ಞಾನ ಪ್ರಪಂಚಕ್ಕೆ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಈ ತಂತ್ರಜ್ಞಾನದ ಲಾಭ ಹೆಚ್ಚಿದೆ ಎಂದರು.

ಡಾ. ಆರ್.ಸುನಿತಾ, ಆರ್.ಪಂಕಜ ಅವರು ವಿಕೇಂದ್ರೀಕೃತ ಅಪ್ಲಿಕೇಶನ್ ಆರ್ಕಿಟೆಕ್ಚರ್, ಸ್ಮಾರ್ಟ್ ಕಾಂಟ್ರಾಕ್ಟ್ ಅನುಷ್ಠಾನ ಮತ್ತು ಪ್ರಸ್ತುತ ಉದ್ಯಮದ ಪ್ರವೃತ್ತಿಗಳ ಬಗ್ಗೆ ವಿವರಿಸಿದರು.

ಸಹಾಯಕ ಪ್ರಾಧ್ಯಾಪಕರಾದ ಡಾ. ಟಿ.ಎಸ್.ಹೇಮಂತ್, ಎಂ.ಜಿ.ಉಷಾ ಮತ್ತಿತರರಿದ್ದರು.

## ಮೇ 1ಕ್ಕೆ ಚನ್ನಕೇಶವ ಸ್ವಾಮಿ ದಿವ್ಯ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಲಕ್ಷ್ಮೀ ಚನ್ನಕೇಶವ ಸ್ವಾಮಿ ಜಾತ್ರಾ ಮಹೋತ್ಸವ ಏ. 24ರಿಂದ ಮೇ 10ರ ವರೆಗೆ ನೆರವೇರಲಿದೆ.

ಮೇ 1ರಂದು ದಿವ್ಯ ರಥೋತ್ಸವ ನಡೆಯಲಿದೆ. ಏ. 24ರ ಶುಕ್ರವಾರ ರಾತ್ರಿ 8 ಗಂಟೆಗೆ ದೇವತಾರಾಧನೆ, ವಿಶ್ವಕ್ಸೇನಾರಾಧನಾ ಮೃತ್ತಿಕಾ ಸಂಗ್ರಹಣ, ಪೂರ್ವಕ ಅಂಕುರಾರ್ಪಣದೊಂದಿಗೆ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಲಾಗುವುದು. ಪ್ರತಿದಿನವೂ ವಿವಿಧ ಧಾರ್ಮಿಕ ವಿಧಿ ವಿಧಾನ ನೆರವೇರಲಿವೆ. ಪಂಚಾಮೃತ ಅಭಿಷೇಕ, ರಕ್ಷಾ ಬಂಧನ, ಯಾಗ ಶಾಲಾ ಪ್ರವೇಶ, ಧವನಮಂಟಪೋತ್ಸವ, ಶ್ರೀಯವರಿಗೆ ಶೇಷ ವಾಹನೋತ್ಸವ, ಪ್ರಹ್ಲಾದ ಪರಿಪಾಲನೋತ್ಸವ, ಚಿಕ್ಕ ಗರುಡೋತ್ಸವ ನಡೆಯಲಿದೆ.

ಏ. 30ರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರ ವರೆಗೆ ಕಲ್ಯಾಣೋತ್ಸವ, ಸಂಜೆ ಸಂಜನ ಗರುಡೋತ್ಸವ, ಗಜೇಂದ್ರ ಮೋಕ್ಷೋತ್ಸವ ನಡೆಯಲಿದೆ. ಮೇ 1ರ ಶುಕ್ರವಾರ ಮಧ್ಯಾಹ್ನ 12.30ರಿಂದ 1 ಗಂಟೆ ವೇಳೆಯಲ್ಲಿ ಸಲ್ಲುವ ಶುಭ ಕುಳೀರ ಲಗ್ನದಲ್ಲಿ ದಿವ್ಯ ಮಹಾರೋತ್ಸವ ಜರುಗಲಿದ್ದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಶುಭನ್ವಿತಾ, ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ್ ಸೇರಿ ಇತರರು ಪಾಲ್ಗೊಳ್ಳಲಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್-24

1800: ಅಮೆರಿಕಾದಲ್ಲಿ ವಿಶ್ವಪ್ರಸಿದ್ಧ ಗ್ರಂಥಾಲಯವಾದ Library of Congress ಸ್ಥಾಪನೆಯಾಯಿತು.

1898: ಸ್ಪೇನ್ ಮತ್ತು ಅಮೆರಿಕಾದ ನಡುವೆ ಯುದ್ಧ ಆರಂಭವಾಯಿತು.

1970: ಚೀನಾದ ಮೊದಲ ಉಪಗ್ರಹ **Dong Fang Hong 1** ಯಶಸ್ವಿಯಾಗಿ ಉಡಾಯಿಸಲಾಯಿತು.

1990: **Hubble Space Telescope** ಅನ್ನು ಅಂತರಿಕ್ಷಕ್ಕೆ ಉಡಾಯಿಸಲಾಯಿತು.

**ಜನನ**

1916: ಬಾಲಿವುಡ್ ನಟ ಹಾಗೂ ನಿರ್ದೇಶಕ ರಾಜ್ ಕಪೂರ್

1934: ಪ್ರಸಿದ್ಧ ನಟಿ ಶಿರ್ಲಿ ಮೆಕ್‌ಲೇನ್

**ಮರಣ**

1974: ಪ್ರಸಿದ್ಧ ಭಾರತೀಯ ರಾಜಕಾರಣಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ವೀರ್ ಸಾವರ್ಕರ್

# ಕರ್ನಾಟಕದ ಅಸ್ಮಿತೆಯ ಶಿಲ್ಪಿ ವರನಟ ಡಾ. ರಾಜಕುಮಾರ್

**- ಮೈ.ನಾ.ಲೋಕೇಶ್, ಮೈಸೂರು**


ಕರ್ನಾಟಕದ ನೆಲ, ಭಾಷೆ, ಸಂಸ್ಕೃತಿಯ ಪ್ರತಿರೂಪವಾಗಿ, ಸರಳತೆಯ ಮೂರ್ತ ರೂಪವಾಗಿ, ಅಭಿನಯದ ವಿರಾಟರೂಪದಿಂದ ಕನ್ನಡಿಗರ ಹೃದಯ ಸಿಂಹಾಸನದ ಅನಿಭಷಕ್ತ ದೊರೆಯಾಗಿ ನೆಲೆ ನಿಂದವರು ಡಾ. ರಾಜಕುಮಾರ್. ಅವರು ಕೇವಲ ಕಲಾವಿದರಲ್ಲ ಅವರು ನಾಡಿನ ಅಸ್ಮಿತೆಯ ಪ್ರತೀಕವಾಗಿದ್ದರು.

ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂಬ ಭಾವನೆಗೆ ಜೀವ ತುಂಬಿದ ಜೀವನ್ಮುಖಿ ರಾಜ್. ಮುತ್ತುರಾಜನ ಬಾಲ್ಯ, ಕಲ್ಲು ಮುಳ್ಳುಗಳ ಹಾದಿಯಾಗಿತ್ತು. ಹೊಟ್ಟೆ ಹೊರೆಯಲು ನಾಟಕ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ತಂದೆ ಪುಟ್ಟಸ್ವಾಮಯ್ಯನವರ, ಬವಣೆಯನ್ನು ಅರಿತು, ಮೂರನೆಯ ತರಗತಿಯಲ್ಲೇ ಶಾಲೆಗೆ ವಿದಾಯ ಹೇಳಿದರು ರಾಜ್. ಸಂಕಟ, ಸಾಮಾಜಿಕ ಅಪಮಾನಗಳನ್ನು ಮೌನವಾಗೇ ಅನುಭವಿಸಿ, ಅರಗಿಸಿ ಅರಳಿ ನಿಂತ ಬ್ರಹ್ಮ ಕಮಲ ರಾಜ್ ಕುಮಾರ್. ಜಾತಿ ಮತ್ತು ವರ್ಗ ವ್ಯವಸ್ಥೆಯ ಕಬಂಧ ಬಾಹುಗಳ ಹಿಡಿತದಲ್ಲಿ ನಲುಗುತ್ತಿದ್ದ, ಸಾಮಾಜಿಕ ಸಂದರ್ಭದಲ್ಲಿ ಯಾವುದೇ ಪ್ರಬಲ ಜಾತಿಯ, ಶ್ರೀಮಂತಿಕೆಯ ಬೆಂಬಲವಿಲ್ಲದೇ, ಶಿಕ್ಷಣದ ಒತ್ತಾಸೆಯಿಲ್ಲದೆ ಕೇವಲ ಪ್ರತಿಭೆ, ಶ್ರಮದಿಂದ ಸಾಮಾಜಿಕ-ಆರ್ಥಿಕ, ಕರಾಳ ಕಟ್ಟಳೆಗಳನ್ನು ಮೀರಿ ಬೆಳೆದು ನಿಂತ ಅನನ್ಯ ಸಾಧಕ ಡಾ ರಾಜ್ ಕುಮಾರ್. ಒಪ್ಪೊತ್ತಿನ ಊಟಕ್ಕೂ ಕಷ್ಟಪಟ್ಟು, ಶ್ರಮದ, ಬೆವರಿನ ಮಹತ್ವ ಅರಿತು, ಮೊದಲು ಬೆವರಿನ ಮನುಷ್ಯನಾಗಿ ನಂತರ ಬಂಗಾರದ ಮನುಷ್ಯನಾದ ಯುಗ ಪುರುಷ ಡಾ. ರಾಜ್ ಕುಮಾರ್.

ತಮ್ಮ ಚಿತ್ರಗಳ ಮೂಲಕ ಕರ್ನಾಟಕದ ಸಂಸ್ಕೃತಿ, ಪರಂಪರೆ, ಸಾಹಿತ್ಯ, ಕಲಾ ವೈಭವಕ್ಕೆ ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ತಂದುಕೊಟ್ಟ ಪ್ರಾತಃ ಸ್ಮರಣೀಯರು ಡಾ. ರಾಜ್ ಕುಮಾರ್. ಇಡೀ ಜಗತ್ತಿನಲ್ಲಿ ರಾಜ್‌ರಷ್ಟು ವೈವಿಧ್ಯಮಯ ಪಾತ್ರಗಳನ್ನು, ಅಷ್ಟೇ ಸಮರ್ಥವಾಗಿ ನಿಭಾಯಿಸಿದ, ಗಾಯನದಲ್ಲೂ ಸೈ ಎನಿಸಿಕೊಂಡ ಕಲಾವಿದ ಮತ್ತೊಬ್ಬರಿಲ್ಲ.

ಬೇಡರ ಕಣ್ಣಪ್ಪ ಚಿತ್ರದಿಂದ ನಾಯಕ ನಟನಾಗಿ ವೃತ್ತಿ ಜೀವನ ಆರಂಭಿಸಿದ ರಾಜ್ ದಾಖಲೆಯ ಇನ್ನೂರು ಚಿತ್ರಗಳಲ್ಲಿ, ಅಭಿನಯಿಸಿ, ಅತಿ ಹೆಚ್ಚು ಯಶಸ್ವಿ ಚಿತ್ರಗಳನ್ನು ಕೊಟ್ಟ ವರನಟ.

ಚಲನಚಿತ್ರ ರಂಗವೆಂದರೆ, ಭೋಗ, ಹಣ, ಆಡಂಬರ ಎಂಬ ಜನಾಭಿಪ್ರಾಯದ ನಡುವೆ ಈ ರಂಗವನ್ನು ಸದ್ಭಾವನೆಯ, ಆಧ್ಯಾತ್ಮಿಕದ ಕ್ಷೇತ್ರವನ್ನಾಗಿ ಕಟ್ಟಿದ ಸಾಂಸ್ಕೃತಿಕ ರಾಯಭಾರಿ ಡಾ. ರಾಜ್ ಕುಮಾರ್. ತಮ್ಮ ಚಿತ್ರಗಳ ಮೂಲಕ ಸಮಾಜದ ಓರೆ-ಕೋರೆಗಳನ್ನು ತಿದ್ದುವ, ಸಾಮಾಜಿಕ ಅನಿಷ್ಟಗಳು ವಿರುದ್ಧ ಹೋರಾಡುವ, ಕೌಟುಂಬಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಸಮಾಜದಲ್ಲಿ ಧನಾತ್ಮಕ ಪರಿವರ್ತನೆಗೆ ನಾಂದಿ ಹಾಡಿದ್ದು ವಿಶೇಷ. 1971ರಲ್ಲಿ ತೆರೆ ಕಂಡ ಬಂಗಾರದ ಮನುಷ್ಯ ಚಲನಚಿತ್ರ, ಚಿತ್ರಮಂದಿರದಲ್ಲಿ ಎರಡು ವರ್ಷಕ್ಕೂ ಹೆಚ್ಚು ದಿನಗಳು ಪ್ರದರ್ಶನ ಕಂಡು ದಾಖಲೆ ಬರೆಯಿತು. ರಾಜೀವಪ್ಪನ ಪಾತ್ರದಲ್ಲಿ ಅಮೋಘ ಅಭಿನಯ ನೀಡಿದ, ರಾಜ್ ಮಣ್ಣಿನ ಮಗನಾಗಿ ನೀಡಿದ ಸಂದೇಶ, ನಾನಾ ಕಾರಣಗಳಿಗಾಗಿ ನಗರಗಳಿಗೆ ವಲಸೆ ಹೋಗಿದ್ದ. ಗ್ರಾಮೀಣ



ಯುವಕರು ಮತ್ತೆ ಹಳ್ಳಿಗಳತ್ತ, ಕೃಷಿಯತ್ತ ಒಲವು ತೋರುವ ಪರಿವರ್ತನೆಗೆ ಮುನ್ನುಡಿ ಬರೆಯಿತು.

### ಕರ್ನಾಟಕಕ್ಕೆ ಡಾ. ರಾಜ್ ಕೊಡುಗೆ

ಎರಡು ತಲೆಮಾರು ಕಳೆದರೂ ಅವರು, ಪೀಳಿಗೆಗಳನ್ನು ಪ್ರಭಾವಿಸುತ್ತಿರುವುದೇ, ಆಕರ್ಷಿಸುತ್ತಿರುವುದೇ ಆ ಅಪೂರ್ವ ನಟನ ಅನನ್ಯತೆಗೆ ಸಾಕ್ಷಿ. ಕನ್ನಡ ಭಾಷೆಯಿರುವ ತನಕ ರಾಜ್ ನಮ್ಮೊಂದಿಗಿರುತ್ತಾರೆ. ಅವರು ಅಮರಜೀವಿ. ನಾಡು ನುಡಿಗೆ ಸಂಕಷ್ಟ ಎದುರಾದಾಗ ಸದಾ ಬೆಂಬಲವಾಗಿ ನಿಲ್ಲುತ್ತಿದ್ದ ರಾಜ್, 1981ರಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನ ದೊರೆಯಬೇಕು ಎಂದು ಪಾಟೀಲ್ ಪುಟ್ಟಪ್ಪ, ಚಂಪಾ ಮುಂತಾದ ಕನ್ನಡ ಚಳವಳಿಗಾರರು ಆರಂಭಿಸಿದ ಗೋಕಾಕ್ ಚಳುವಳಿಗೆ ಬೆಂಬಲವಾಗಿ ನಿಂತರು. ರಾಜ್ಯಾದ್ಯಂತ ಪ್ರವಾಸ ಮಾಡಿ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಮೂಲಕ ಭಾಷಾ ಹೋರಾಟಕ್ಕೆ ಸಿಂಹಬಲ ತುಂಬಿದರು.

1961ರಲ್ಲಿ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ, ವಂತಿಗೆ ಸಂಗ್ರಹಿಸಿ ಕೊಟ್ಟು ಅವರ ನೆರವಿಗೆ ನಿಂತು ಮಾನವೀಯತೆ ಮೆರೆದರು. ಡಬ್ಬಿಂಗ್ ಹಾವಳಿಯಿಂದ ತತ್ತರಿಸಿದ್ದ, ಕನ್ನಡ ಚಿತ್ರರಂಗದ ಪರವಾಗಿ ಡಬ್ಬಿಂಗ್ ವಿರೋಧಿ ಹೋರಾಟಕ್ಕೆ ಶಕ್ತಿ ತುಂಬಿದರು. ಜಿಲ್ಲಾ ಕೇಂದ್ರಗಳಲ್ಲಿ ರಂಗಮಂದಿರ ನಿರ್ಮಾಣಕ್ಕೆ ರಸಮಂಜರಿ ಕಾರ್ಯಕ್ರಮಗಳನ್ನು ಉಚಿತವಾಗಿ ನೆಡೆಸಿಕೊಟ್ಟರು. ಇನ್ನು ವೈಯಕ್ತಿಕವಾಗಿ, ಸಂಕಷ್ಟದಲ್ಲಿದ್ದ ಕಲಾವಿದರು ತಂತ್ರಜ್ಞರಿಗೆ ಸಹಾಯ ಹಸ್ತ ಚಾಚುತ್ತಿದ್ದ ರಾಜ್, ಪ್ರಚಾರಕ್ಕೆ ಆಸ್ಪದ ಕೊಡುತ್ತಿರಲಿಲ್ಲ, ಬಲಗೈಯಿಂದ ನೀಡಿದ ದಾನ ಎಡಗೈಗೆ ತಿಳಿಯಬಾರದು ಎಂಬುದು ಅವರ ಸಿದ್ಧಾಂತವಾಗಿತ್ತು. ಮೈಸೂರಿನಲ್ಲಿ ಶ್ರೀಮತಿ ಪಾರ್ವತಮ್ಮನವರ ಒತ್ತಾಸೆಯಂತೆ ನಿರ್ಮಿಸಿದ ಶಕ್ತಿ ಧಾಮ, ಅಶಕ್ತ, ದೀನ ಮಹಿಳೆಯರ ಆಶ್ರಯ ತಾಣವಾಗಿ ಅವರಿಗೆ ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದೆ.

ಒಂದು ಕಾಲಮಾನದ ಕನ್ನಡ ಬದುಕು ಹೇಗಿರಬೇಕು ಎಂಬುದನ್ನು ತಮ್ಮ ಚಿತ್ರಗಳ ಮೂಲಕ ಕಲಿಸಿ ಕೊಟ್ಟು ಸಮಾಜದ ಒಗ್ಗಟ್ಟಿಗೆ ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಪ್ರೇರಣೆ ನೀಡಿದವರು ಡಾ ರಾಜ್ ಕುಮಾರ್. ಕೇಂದ್ರ ಸರ್ಕಾರದ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ರಾಜ್ಯ ಸರ್ಕಾರದ ಕರ್ನಾಟಕ ರತ್ನ ಪ್ರಶಸ್ತಿ ಸೇರಿ ಡಾ. ರಾಜ್ ಕುಮಾರ್ ಭಾಜನರಾದ ಪ್ರಶಸ್ತಿ, ಬಿರುದುಗಳು ಅಗಣಿತ.

ತಮಗಿದ್ದ ಜನಪ್ರಿಯತೆ, ಜನಬೆಂಬಲದಿಂದ ಮನಸ್ಸು ಮಾಡಿದ್ದರೆ, ರಾಜಕೀಯ ಕ್ಷೇತ್ರದಲ್ಲಿ ಉತ್ತುಂಗ ಸ್ಥಾನ ಪಡೆಯಬಹುದಾಗಿತ್ತು ಆದರೂ, ಕನ್ನಡಿಗರು ತಮ್ಮ ಹೃದಯದಲ್ಲಿ ನೀಡಿರುವ ಅಭಿಮಾನವೇ ಸಾಕು ಎಂದ ಸಂತ ಡಾ. ರಾಜ್ ಕುಮಾರ್.

ಅವರು, ವ್ಯಕ್ತಿತ್ವದಲ್ಲಿ ಶಿಸ್ತು, ನೈತಿಕತೆ ಮೌಲ್ಯಗಳನ್ನು ಕಾಪಾಡಿಕೊಂಡು ಯುವಜನತೆಗೆ ಆದರ್ಶಪ್ರಾಯರಾದರು. ರಾಜ್ ಕುಮಾರ್ ಜನ್ಮಶತಮಾನೋತ್ಸವದ ಹೊಸ್ತಿಲಲ್ಲಿ, ಅರ್ಹವಾಗಿ ದೊರೆಯಬೇಕಾದ ಭಾರತ ರತ್ನ ಪ್ರಶಸ್ತಿ ಈ ಕಲಾ ತಪಸ್ವಿಗೆ ದೊರೆಯಲಿ ಎಂಬುದು ಏಳು ಕೋಟಿ ಕನ್ನಡಿಗರ ಒತ್ತಾಸೆ.



ಅವರ ಅಭಿನಯ..ಅವರು ಕಟ್ಟಿಕೊಟ್ಟ ಮೌಲ್ಯಗಳು ಇಂದಿಗೂ ಕನ್ನಡಿಗರ ಹೃದಯದಲ್ಲಿ ಜೀವಂತವಾಗಿದ್ದು, ಕರ್ನಾಟಕದ ಅಸ್ಮಿತೆಯನ್ನು ಶಾಶ್ವತವಾಗಿ ಬೆಳಗಿಸುತ್ತಿವೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248